5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆ, ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5017/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಶೋಕ್ ಕುಮಾರ್ ಎನ್. | ಪ್ರಾಸಾಃ 6 |
| ತಂದೆಯ ಹೆಸರು | : | ನಾರಾಯಣ ಶೆಟ್ಟಿ | ಚಾಸಾಃ 8 |
| ಪ್ರಾಯ | : | 42 ವರ್ಷ | ದಿನಾಂಕಃ **22.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಕೊಲ್ಲಹಳ್ಳಿ ಗ್ರಾಮ, ಸಕಲೇಶಪುರ ತಾಲೂಕು, ಹಾಸನ ಜಿಲ್ಲೆ. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು MYC-2119 ನೋಂದಣಿ ನಂಬ್ರದ ಜೀಪು ಹೊಂದಿದ್ದು, ಸುಮಾರು 2016ನೇ ಇಸವಿಯಲ್ಲಿ ಸದರಿ ಜೀಪನ್ನು ಮಾರಾಟ ಮಾಡಲು ಉಪ್ಪಿನಂಗಡಿಗೆ ತಂದಿದ್ದು, ಆ ದಿನ ಸ್ಟ್ರೈಕ್ ಇದ್ದ ಕಾರಣ ನನ್ನ ಪರಿಚಯದ ಸಂಜೀವ ಗೌಡ ಎಂಬುವವರ ಮನೆಯಲ್ಲಿ ಇಟ್ಟು ವಾಪಾಸ್ಸು ನನ್ನ ಊರಾದ ಸಕಲೇಶಪುರಕ್ಕೆ ಹೋಗಿರುತ್ತೇನೆ. ನಾನು ಜೀಪನ್ನು ನನ್ನ ಪರಿಚಯದವರ ಮನೆಯಲ್ಲಿ ಇಟ್ಟು ಹೋದ ಒಂದು ವಾರದ ಬಳಿಕ ಪೊಲೀಸರು ನನಗೆ ನೋಟೀಸನ್ನು ನೀಡಿ ಠಾಣೆಗೆ ಬರುವಂತೆ ಸೂಚಿಸಿದ್ದು, ಅದರಂತೆ ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಆಗ ಪೊಲೀಸರು ನನ್ನಿಂದ ಒಂದು ದಾಖಲೆಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಬಳಿಕ ನನ್ನ ವಾಹನವನ್ನು ಬಿಟ್ಟುಕೊಟ್ಟಿದ್ದು, ನಾನು ಅದನ್ನು ತೆಗೆದುಕೊಂಡು ಹೋಗಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನಿಶಾನೆ ಪಿ-13 ರಲ್ಲಿ ಇರುವ ಜೀಪನ್ನು ನೋಡಿ ಗುರುತಿಸಿರುತ್ತಾರೆ.

2. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ-20 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-20 ರಲ್ಲಿ ಏನು ಬರೆದಿರುತ್ತಾರೆ ಎಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಅದನ್ನು ಓದಿ ನೋಡಿರುವುದಿಲ್ಲ ಮತ್ತು ಅದೇ ರೀತಿ ಪೊಲೀಸರಿಗೆ ನನಗೆ ಅದನ್ನು ಓದಿ ತಿಳಿಸಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತವನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

3. ನನಗೆ ನ್ಯಾಯಾಲಯದ ಮುಂದಿರುವ 2ನೇ ಆರೋಪಿಯ ಪರಿಚಯ ಇರುವುದಿಲ್ಲ. ನಾನು MYC-2119 ನೋಂದಣಿ ನಂಬ್ರದ ಜೀಪನ್ನು ಮಾರಾಟ ಮಾಡಲು ಇಚ್ಛಿಸಿದಾಗ ನನ್ನ ಪರಿಚಯದ ಪ್ರಭಾ ಎಂಬುವವರು ನನ್ನ ಸ್ನೇಹಿತ ಉದಯ ಚಕ್ಕಿತ್ತಾಯ ಎಂಬುವವರಿಗೆ ಜೀಪು ಬೇಕು ಎಂದು ಹೇಳುತ್ತಿದ್ದರು ಎಂಬ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆತನು ನನಗೆ ಉದಯ ಚಕ್ಕಿತ್ತಾಯ ಎಂಬುವವರನ್ನು ಪರಿಚಯ ಮಾಡಿಕೊಟ್ಟಿದ್ದು, ಅವರಿಗೆ ನಾನು ಜೀಪನ್ನು ರೂ.90,000/- ಗಳಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದು, ಅದರಂತೆ ಅವರು ನನಗೆ ರೂ.60,000/- ಗಳನ್ನು ನೀಡಿ, ಉಳಿದ ಹಣವನ್ನು ನಂತರ ಕೊಡುವುದಾಗಿ ಹೇಳಿ ನವೆಂಬರ್ 2016 ರ ಮೊದಲ ವಾರದಲ್ಲಿ ಜೀಪನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಜೀಪನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಫಾರ್ಮ್ ನಂಬರ್ 29 ಕ್ಕೆ ಸಹಿ ಮಾಡಿ

ವರ್ಗಾಯಿಸಲು ಫಾರ್ಮ್ ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 02.01.2016 ರಂದು ಪೊಲೀಸರು ನನಗೆ ಠಾಣೆಗೆ ಬರುವಂತೆ ಹೇಳಿದಾಗ ನಾನು ಠಾಣೆಗೆ ಹೋಗಿ ಪೊಲೀಸರನ್ನು ವಿಚಾರಿಸಿದಾಗ ನನ್ನ ಜೀಪನ್ನು ಆರೋಪಿತರು ಪ್ರಾಸಾ.2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಮೋಟಾರುಸೈಕಲಿಗೆ ಡಿಕ್ಕಿ ಹೊಡೆದು ಅವರನ್ನು ಕೊಲೆ ಮಾಡಲು ಪ್ರಯತ್ನಿಸಿರುವ ವಿಚಾರ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನನ್ನ ಹೆಸರಿನಲ್ಲಿದ್ದ ಜೀಪು ಈ ದಿನ ನ್ಯಾಯಾಲಯದ ಮುಂದಿರುವ 2ನೇ ಆರೋಪಿಯ ಬಳಿಯಲ್ಲಿ ಇತ್ತು ಎಂಬುದಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 20.01.2016 ರಂದು ನಾನು ಪೊಲೀಸರಿಗೆ ಈಗ ನನಗೆ ಓದಿ ಹೇಳಿದಂತೆ "ನನಗೆ ಇತ್ತೀಚೆಗೆ ಹಣದ………………... ಎಂದು ನೀಡಿದ ಹೇಳಿಕೆ " ಎಂಬುದಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಶಾನೆ ಪಿ-21 ಎಂದು ಗುರುತಿಸಲಾಯಿತು.

4. ದಿನಾಂಕ 20.01.2016 ರಂದು ನಾನು ಮಾನ್ಯ ನ್ಯಾಯಾಲಯದ ಆದೇಶದಂತೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಚಾಸಾ.17 ಮತ್ತು ಚಾಸಾ.18 ರವರ ಸಮಕ್ಷಮದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ನನ್ನ ಮಾಲೀಕತ್ವದ ಜೀಪನ್ನು ನಿಶಾನೆ ಪಿ-20 ರಂತೆ ಸ್ವತ್ತು ಬಿಡುಗಡೆ ಮಹಜರು ಮುಖೇನ ನನ್ನ ವಶಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ-20 ನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಪ್ರಸ್ತುತ ಪ್ರಾಸಾ.2 ರವರು ಮೃತಪಟ್ಟಿದ್ದಾರೆ. ಪ್ರಾಸಾ.2 ರವರು ಮೃತಪಟ್ಟಿದ್ದರಿಂದ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **2**ನೇ ಆರೋಪಿತರ ಪರ ಶ್ರೀ ಎಂ.ವಿ.ಜಿ. ವಕೀಲರಿಂದಃ</u>

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಕೆ. ವಕೀಲರಿಂದಃ</u>

8.

ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.